# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 322 (331)
ಸದಸ್ಯರ ಹೆಸರು : ಶ್ರೀ ಟಿ.ಎನ್. ಜವರಾಯಿಗೌಡ
(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು )
ಉತ್ತರಿಸುವ ದಿನಾಂಕ : 19.08.2026
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಪ್ರದೇಶದಲ್ಲಿ ಕಂದಾಯ ಖಾಸಗಿ ರಸ್ತೆಗಳನ್ನು ಸರ್ಕಾರಿ ಸ್ವತ್ತು ಎಂದು ಘೋಷಿಸಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ವಿವರ ನೀಡುವುದು; | ಸರ್ಕಾರದ ಹಂತದಲ್ಲಿ ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಆ) | ಈ ಹಿಂದೆ ಬೆಂಗಳೂರು ನಗರದ ಸುತ್ತಮುತ್ತ ಕಂದಾಯ, ಖಾಸಗಿ ರಸ್ತೆಗಳನ್ನು ಸರ್ಕಾರಿ ಎಂದು ತೀರ್ಮಾನಿಸಿ, ಆದೇಶ ಹೊರಡಿಸಲಾಗಿತ್ತೇ, ಹಾಗಿದ್ದಲ್ಲಿ ಆದೇಶ ಪ್ರತಿಯೊಂದಿಗೆ ವಿವರ ನೀಡುವುದು; | |
| ಇ) | ಸುಮಾರು 30-40 ವರ್ಷಗಳಿಂದ ರಾಜ್ಯದಲ್ಲಿರುವ ಗ್ರಾಮ ಆಡಳಿತಾಧಿಕಾರಿಗಳು (ವಿ.ಎ.ಗಳು) ಗ್ರಾಮ ಪಂಚಾಯತಿಗಳಿಗೆ ಬಾರದೆ ತಾಲ್ಲೂಕು/ ನಾಡ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ತಪ್ಪಿಸಲು ಸರ್ಕಾರ ಗ್ರಾಮ ಪಂಚಾಯತಿಗಳಲ್ಲೇ ಇವರಿಗೆ ಕಚೇರಿ ಒದಗಿಸಿ, ಕಾರ್ಯನಿರ್ವಹಿಸಬೇಕು ಎಂದು ಆದೇಶ ಮಾಡಿದ್ದರೂ ಸಹ ಇಲ್ಲಿಯ ತನಕ ಇದು ಬಾರದೆ ಇರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ , ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ರಾಜ್ಯದಲ್ಲಿನ ಗ್ರಾಮ ಆಡಳಿತ ಅಧಿಕಾರಿಗಳು ಗ್ರಾಮ ಮಟ್ಟದಲ್ಲಿ ಸಾರ್ವಜನಿಕ ಸ್ನೇಹಿಯಾಗಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ಹಾಗೂ ಗ್ರಾಮ ಮಟ್ಟದಲ್ಲಿ ಲಭವಾಗಿ ಶೀಘ್ರಗತಿಯಲ್ಲಿ ಸೇವೆಗಳನ್ನು ಒದಗಿಸಲು ಗ್ರಾಮ ಆಡಳಿತ ಅಧಿಕಾರಿಗಳಿಗೆ ಆಯಾಯ ವೃತ್ತಗಳ ಕೇಂದ್ರ ಸ್ಥಾನದ ಸರ್ಕಾರಿ ಕಟ್ಟಡಗಳಲ್ಲಿ ಅಥವಾ ಗ್ರಾಮ ಪಂಚಾಯ್ತಿ ಕಟ್ಟಡಗಳಲ್ಲಿ ಕಛೇರಿಗಳನ್ನು ಹಾಗೂ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರವು ನಿರ್ಣಯಿಸಿರುವೆ ರಾಜ್ಯದಲ್ಲಿ ಒಟ್ಟು 8350 ಗ್ರಾಮ ಆಡಳಿತ ವೃತ್ತಗಳಿದ್ದು, ಒಟ್ಟು 1661 ವೃತ್ತಗಳಿಗೆ ಕಂದಾಯ/ಸ್ಥಳೀಯ ಸಂಸ್ಥೆ/ ಮುಜರಾಯಿ ಸಂಸ್ಥೆ ಮತ್ತು ಇತರೆ ಸರ್ಕಾರಿ ಕಟ್ಟಡಗಳಲ್ಲಿ, 6152 ವೃತ್ತಗಳಿಗೆ ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡಗಳಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಗೆ ಸ್ಥಳವಕಾಶ ಕಲ್ಪಿಸಲಾಗಿರುತ್ತದೆ. ಬಾಕಿ ಇರುವ 537 ವೃತ್ತಗಳಿಗೆ ಸರ್ಕಾರಿ ಜಮೀನು/ಇತರೆ ಜಮೀನುಗಳನ್ನು ಗುರುತಿಸಿ VAO ಕಛೇರಿಗಳಿಗೆ ಸ್ಥಳವಕಾಶ ಕಲ್ಪಿಸುವ ಕುರಿತು ಕ್ರಮಕೈಗೊಳ್ಳಲಾಗುತ್ತಿದೆ. |
| ಈ) | ಇದಕ್ಕೆ ಕಡಿವಾಣ ಹಾಕಲು ರೈತರಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ಹಾಗೂ ಸರ್ಕಾರದ ಕೆಲಸಗಳು ಮನೆ ಬಾಗಿಲಿನಲ್ಲಿ ಆಗುವುದರಿಂದ ಗ್ರಾಮ ಪಂಚಾಯತಿ ಕಛೇರಿಗಳಲ್ಲೇ, ಈ ಕಂದಾಯ ಇಲಾಖೆಯ ಆಡಳಿತಾಧಿಕಾರಿಗಳಿಗೆ ಪ್ರತ್ಯೇಕ ಕಛೇರಿ ತೆರೆದು ಕಾರ್ಯನಿರ್ವಹಿಸುವ ವ್ಯವಸ್ಥೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುವುದೇ; (ಮಾಹಿತಿ ಒದಗಿಸುವುದು) | |
| ಉ) | ರಾಜ್ಯದಲ್ಲಿ ಸುಮಾರು 60 ಲಕ್ಷಕ್ಕೂ ಹೆಚ್ಚ ಕೃತಿ ಭೂಮಿಗೆ ಪೌತಿ ಖಾತೆ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಇದಕ್ಕೊಂದು ಅಂತಿಮ ಸಮಯ ನಿಗದಿ ಮಾಡಿ ನಿಗದಿತ ಅವಧಿಯೊಳಗೆ ಬಾಕಿ ಇರುವ ಎಲ್ಲಾ ಪೌತಿ ಖಾತೆಗಳನ್ನು ಮಾಡಲು ಸರ್ಕಾರದಿಂದ ಆದೇಶ/ ಸುತ್ತೋಲೆ ಹೊರಡಿಸಿ ಸಾರ್ವಜನಿಕರಿಗೆ / ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರ | ಇ-ಪೌತಿ ಖಾತೆಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂ:ಕಂಇ 95 ಎಂ.ಆರ್.ಆರ್:2025 ದಿ:07/03/2026 ರಂತೆ ಪೌತಿ/ವಾರಸು ಖಾತೆ ಆಂದೋಲನ ನಡೆಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. |

| | | |
|---|---|---|
| | ಕ್ರಮ ಕೈಗೊಳ್ಳಲಾಗುವುದೇ? (ಮಾಹಿತಿ ನೀಡುವುದು) | |

**ಸಂಖ್ಯೆ: ಆರ್‌ಡಿ 153 ಎಲ್‌ಸಿಕ್ಯೂ 2026**

**(ಡಾ: ಜಿ. ಪರಮೇಶ್ವರ )**
ಉಪ ಮುಖ್ಯಮಂತ್ರಿಗಳು